ಶ್ರೀ ಎಚ್. ಎಸ್. ಸಿದ್ದಪ್ಪ.— ಮಾನ್ಯ ಅಧ್ಯಕ್ಷಣೆಯವರೇ, ನಾನು ಇದೇ ವಿಷಯದ ಬಗ್ಗೆ ರೂಲ್ ೨೯ರ ಪ್ರಕಾರ ನೋಟೀಸ್ ಕಳಿಸಿಕೊಟ್ಟಿದ್ದೇನೆ. ನಿನ್ನೆಯೇ ಯಾವ ರೀತಿ ಕಳಿಸಿಕೊಟ್ಟಿರಿ ಎಂದು ಮಾನ್ಯ ಆರೋಗ್ಯ ಮಂತ್ರಿಗಳು ಕೇಳಿದರು. ಆದ್ದರಿಂದ ನಾನು ನೋಟೀಸ್ ಕಳಿಸಿರುವುದು ನಿಜವೇ ಅಥವಾ ಇಲ್ಲವೆ ಎಂಬುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ತಾವು ಕಳಿಸಿರುವುದು ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇಂದು ಪತ್ರಿಕೆಯಲ್ಲಿ ಬರುತ್ತದೆಂದು ತಿಳಿದುಕೊಂಡು ಅದು ಹೇಗೆ ನೀವು ನನ್ನೆಯೇ ಕಳಿಸಿದ್ದೀರಿ ಎಂದು ನಾನು ಕೇಳಿದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದನ್ನು ಅಧ್ಯಕ್ಷರು ಹೇಳಬೇಕು.

ಅಧ್ಯಕ್ಷರು.—ತಾವು ಕಳಿಸಿಕೊಟ್ಟ ನೋಟೀಸಿಗೆ ರೂಲ್ ೨೯ರ ಪ್ರಕಾರ ಕಾರಣಗಳನ್ನು ಕೊಟ್ಟಿಲ್ಲ ಎಂದು ನಮ್ಮ ಕಛೇರಿಯಿಂದ ತಮಗೆ ಜವಾಬನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಅದು ನನಗೆ ತಲುಪಿಲ್ಲ.

ಅಧ್ಯಕ್ಷರು,—ತಮ್ಮ ರೂಮಿಗೆ ಆ ಕಾಗದ ಹೋಗಿರಬಹುದು.

(*ii*) Re. *Arrest of persons who came to seek employment in Gulbarga.*

ಶ್ರೀ ಎಂ. ಎಸ್. ಕೃಷ್ಣನ್.—ನಾನು ೩೧೨ನೇ ರೂಲ್ ಪ್ರಕಾರ ತಮಗೆ ಒಂದು ನೋಟೀಸನ್ನು ಗುಲ್ಬರ್ಗದಲ್ಲಿ ನಡೆದಿರುವ ಘಟನೆಯ ಬಗ್ಗೆ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ತಾವು ಕಳಿಹಿಸಿರುವುದು ನನಗೆ ಗೊತ್ತು. ಅದನ್ನು ಮುಖ್ಯಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಅವರು ಅದರ ಬಗ್ಗೆ ಒಂದು ಕಾಂಪ್ರಹೆನ್ಸಿವ್ ಸ್ಟೇಟ್ ಮೆಂಟ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ದುಷ್ಕಾಳ ಪರಿಸ್ಥಿತಿಯ ಬಗ್ಗೆ ಸ್ಟೇಟ್ ಮೆಂಟ್ ಮಾಡಬಹುದು. ಆದರೆ ನಾನು ಕಳಿಸಿರುವ ನೋಟೀಸ್ ಬೇರೆ ಗುಲ್ಬರ್ಗದಲ್ಲಿ ೫-೬ ಸಾವಿರ ಜನರು ಕೆಲಸ ಕೊಡಿ ಎಂದು ಕೇಳುವುದಕ್ಕೆ ಬಂದಾಗ ಅಧಿಕಾರಿಗಳು ಅವರ ಬಗ್ಗೆ ಯಾವ ರೀತಿ ವರ್ತನೆ ಮಾಡಿದ್ದಾರೆಂಬುವರ ಬಗ್ಗೆ ನಾನು ನೋಟೀಸ್ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ಮುಖ್ಯಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಅದಕ್ಕೂ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಸಿದು ಬಂದಂಥ ರೈತರು ಕೆಲಸ ಕೇಳಿದರೆ ಅವರಿಗೆ ಅಧಿಕಾರಿಗಳ ಸರಿಯಾದಂಥ ಉತ್ತರ ಕೊಡದೆ ಸುಮಾರು ೩೦೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು —ಅದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯಮಂತ್ರಿಗಳು ಉತ್ತರ ಕೊಡುಂಹಾಗಿದ್ದರೆ. ಸಂತೋಷ.

(*iii*) Re *Affair of Vanitasevasamaj, Hubli*

ಶ್ರೀ ಬಿ. ವಿ. ಕಕ್ಕಿಲ್ಲಾಯ.—ನಾನು ಸಹ ಒಂದು ನೋಟೀಸನ್ನು ಹುಬ್ಬಳ್ಳಿಯ ವನಿತಾ ಸೇವಾ ಸಮಾಜದ ಬಗ್ಗೆ ಕಳಿಸಿಕೊಟ್ಟಿದ್ದೇನೆ. ಅಲ್ಲಿ ಕೆಲಸ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ತುಂಬಾ ಅನ್ಯಾಯವಾಗುತ್ತಿದೆಯೆಂದು ಆ ಸಮಾಜದ ಆಜೀವ ಸದಸ್ಯರೊಬ್ಬರು ನನಗೆ ಪತ್ರ ಬರೆದು ತಿಳಿಸಿದ್ದಾರೆ. ಅದೇ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಸರ್ಕಾರದವರು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಅನ್ನ ಸತ್ಯಾಗ್ರಹ ಮಾಡುತ್ತೆವೆಂದು ಬಹಿರಂಗ ಹೇಳಿಕೆ ಕೂಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದನ್ನೆಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಸರ್ಕಾರದವರು ಲ್ಲಿ ಯಾವ ಅವಾಂತರವೂ ಆಗದ ಹಾಗೆ ಮತ್ತು ಸಮಾಜ ಜೀನ್ನಾಗಿ ನಡೆಯುವ ಹಾಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರದ ಗಮನವನ್ನು ನಾನು ಸೆಳೆಯುತ್ತೇನೆ.

2-30 P. M.

ಅಧ್ಯಕ್ಷರು.—ಹುಬ್ಬಳ್ಳಿಯ ವನಿತಾಸೇವಾ ಸಮಾಜದ ನಡೆದ ವಿಚಾರ ಇಲ್ಲಿ ಏತಕ್ಕೆ ಬರಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಎಲ್ಲರಿಗೂ ಗೊತ್ತಿದೆ, ನನಗೂ ಈ ಬಗ್ಗೆ ಪತ್ರ ಬಂದಿದೆ.

ಅಧ್ಯಕ್ಷರು.—ಹಾವುಗಳೆಲ್ಲರೂ ಈ ಬಗ್ಗೆ ಇಷ್ಟೊಂದು ಆಸಕ್ತಿ ವಹಿಸಿದರೆ ಬಹಳ ಸಂತೋಷ.

ಶ್ರೀ ಡಿ. ಕೆ. ನಾಯ್ಕರ್.—ಈ ಬಗ್ಗೆ ಯೋಗ್ಯವಾದ ಮಾಹಿತಿಯನ್ನು ಸಂಗ್ರಹಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪುಗೌಡ.—ಸ್ವಾಮಿ ಹಂಮ್ನಾಬಾದಿನ ತಾಲ್ಲೂಕಿನಲ್ಲಿ ಸೂರ್ಯಭಾನು ಪ್ರತಾಪ್‌ರಾವ್ ಎನ್ನುವವರು ಸೂಯಿಸೈಡ್ ಮಾಡಿಕೊಂಡಿರುವ ಬಗ್ಗೆ ಪೋಲೀಸ್ ಎನ್‌ಕ್ವೈರಿ ನಡೆಯುತ್ತಿದೆ, ಅದನ್ನು ತಿಳಿದು ಹೇಳುತ್ತೇವೆ ಎಂದು ಸರ್ಕಾರದವರು ಹೇಳಿದ್ದರು.

ಅಧ್ಯಕ್ಷರು.—ಆ ಬಗ್ಗೆ ಆಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ.

(iv) re: Land Grant Committee.

ಶ್ರೀ ಎಚ್ ಎಸ್. ಸಿದ್ದಪ್ಪ.—ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಗಳು ಲ್ಯಾಂಡ್ ರೆವಿನ್ಯೂ ಕಮಿಟಿಯನ್ನು ಮಾಡಿ ಯಾರು ಯಾರಿಗೆ ಜಮೀನು ಇಲ್ಲಪ್ಪೋ ಅವರೆಲ್ಲರಿಗೂ ಮತ್ತು ಇತರ ಬಡಬಗ್ಗರಿಗೂ ಜಮೀನು ಕೊಡುತ್ತೇವೆ ಎಂದು ಹೇಳಿದ್ದರು. ಅದು ಎಲ್ಲಿಯವರೆಗೆ ಬಂದಿದೆ. ಏತಕ್ಕೆಂದರೆ ಈಗ ಅಧಿಕಾರಿಗಳು ಏನು ಜಮೀನು ವಿಲೇವಾರಿ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿ, ಈಗ ದರಖಾಸ್ತು ಜಮೀನಿಗಾಗಿ ಬಂದಿರುವ ಸಾವಿರಾರು ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ರಾಜ್ಯಪಾಲರ ಕಾಲದಲ್ಲಿ ಅಧಿಕಾರಿಗಳಿಂದ ಕೂಡಿದ ಲ್ಯಾಂಡ್‌ಗ್ರಾಂಟ್ ಕಮಿಟಿಯನ್ನು ಏನು ಮಾಡಿದ್ದರು, ಅದನ್ನು ಅಬಾಲಿಷ್ ಮಾಡಿ, ಅವರು ಈಗ ಏನು ಅನ್ಯಾಯ ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅದು ನಾನು ಮೊದಲೇ ಹೇಳಿದ ಹಾಗೆ ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಗಬೇಕಾದ್ದರಿಂದ ಜಮೀನು ಹಂಚಿಕೆ ಸಮಿತಿಗಳ ರಚನೆ ಒಂದು ತಿಂಗಳು ತಡವಾಯಿತು. ಈಗ ಆ ಕಮಿಟಿಯಲ್ಲಿ ಯಾರು ಯಾರು ಇರಬೇಕು ಎಂಬುದನ್ನು ತೀರ್ಮಾನ ಮಾಡಿದ್ದೇವೆ ಸೋಮವಾರ ಅಥವಾ ಮಂಗಳವಾರ ಅವುಗಳನ್ನು ಅನೌನ್ಸ್ ಮಾಡುತ್ತೇನೆ.

ಶ್ರೀ ಕೋಣಂದೂರ್‌ಲಿಂಗಪ್ಪ.—ಲ್ಯಾಂಡ್ ಗ್ರಾಂಟ್ ಕಮಿಟಿಯನ್ನು ರಚನೆ ಮಾಡುವಾಗ ಖಾಸಗಿ ಯವರು ಮತ್ತು ಶಾಸನ ಸಭಾ ಸದಸ್ಯರ ಸಲಹೆಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಎಲ್ಲರೂ ಸಲಹೆ ಕೊಟ್ಟಿದ್ದಾರೆ. ಯಾರಾದರೂ ಸಲಹೆ ಕೊಡದೇ ಇರುವವರು ಇದ್ದರೆ ಅವರು ಸಲಹೆಯನ್ನು ಕೊಡಬಹುದು.

SRI D. DEVRAJ URS.—The members of the legislature are bound to be there. I think the Taluk Board Presidents are going to be there. The Scheduled Castes members will be there. The Hon. Members are free to offer their suggestions. The Government will consider the suggestions given by the Hon. Members belonging to any party. The Government will certainly consider their suggestions.

SRI H. S. SIDDAPPA.—It is a mistake that the Tahsildar is the Chairman of the Committee.

SRI D. DEVRAJURS.—It is not a mistake.

(v) re: Affairs of the Ideal Co-operative Society